'ನಂದೇ ಮಗಾ ಸಾ... ದುಖಾನಿಗಿಂತ ಫರ್ಲಾಂಗು ಮುಂದೆ ಇರೋ ಸಿಸಿಟೀವಿನಾಗೆ ಬಿದ್ದಿರೋದು... ಆ ಹುಡ್ಗ ಯಾರು ಗೊತ್ತಾಯ್ತಿಲ್ಲ. ಏರಿಯಾದಾಗೆಲ್ಲಾ ತೋರ್ಸಿಕಂಡ್ ಬಂದೀವಿ... ನಮ್ ಏರಿಯಾದವ್ನಲ್ಲ. ಮನ್ಯಾಗ ನೋಡಿದ್ರೆ ಎಲ್ಲಾ ಅಳ್ತಾ ಕುಂತವ್ರೆ... ಏನಾರ ಮಾಡಿ ಸಾರ್...' ಗೋಗರೆದ.

ಕುರ್ಚಿಯ ಹಿಂದಕ್ಕೊರಗಿ ಯೋಚಿಸಿದೆ. ಅರ್ಧ ವಿಚಾರಣೆ ಆಗಲೇ ಮಾಡಿಬಿಟ್ಟಿದ್ದಾರೆ. ಹುಡುಗನ ವಿಡಿಯೊ ಮೊಬೈಲಿನಲ್ಲಿ ಹಾಕಿಕೊಂಡು ಎಲ್ಲಾ ಕಡೆ ತೋರಿಸಿದ್ದಾರೆ. ಕೂಸು ನಿಜವಾಗಿ ಕಿಡ್ನಾಪೇ ಆಗಿದ್ದರೆ ಮಾಡಿದವರಿಗೆ ಇದೂ ಗೊತ್ತಾಗಿಬಿಟ್ಟಿರುತ್ತೆ. ಕೂಸು ಕಿಡ್ನಾಪ್ ಆಗಿರೋ ವಿಷಯ ಹರಡಿದೆ ಅಂತ ಗೊತ್ತಾದರೆ ಮತ್ತೆ ಈ ಕಡೆ ತಲೆ ಹಾಕಲ್ಲ. ಎರಡನೇ ತಲೆನೋವು ಮೀಡಿಯಾಗಳದ್ದು. ವಿಷಯಕ್ಕೆ ರೆಕ್ಕೆ ಪುಕ್ಕಗಳು ಹುಟ್ಟಿಕೊಳ್ಳುತ್ತವೆ. ಸುಮ್ಮನೆ ಪಬ್ಲಿಸಿಟಿ ಸಿಕ್ಕುತ್ತೆ. ಕ್ಲೂ ಸಿಗಬಹುದಾದ ಸಾಧ್ಯತೆ ಎಕ್ಕುಟ್ಟಿ ಹೋಗುತ್ತೆ. ಎರಡರಿಂದಲೂ ಆಗಿದ್ದು ಅನಾನುಕೂಲವೇ.

'ಆಯ್ತು... ಕಂಪ್ಲೇಂಟು ಕೊಡು. ಸ್ಟೇಷನ್ನಿಗೆ ಬರೋ ಮೊದ್ಲು ಎಲ್ರಿಗೂ ಟಾಂಟಾಂ ಹೊಡಕೊಂಡೇ ಬಂದಿದ್ದೀಯಾ. ಎಲ್ಲಾ ಆದ್ಮೇಲೆ ನಿಮ್ಗೆ ಸ್ಟೇಷನ್ನು ಜ್ಞಾಪಕ ಬರ್ತದೆ. ಕೂಸಿನದೊಂದು ಫೋಟೊ ಪ್ರಿಂಟು ಹಾಕಿಸಿ ಪಾಂಪ್ಲೆಟ್ಟು ಹೊಡಿಸ್ತೀನಿ. ನೋಡುವಾ... ಏನಾದ್ರೂ ಗೊತ್ತಾಗಬೌದು...' ಅಂದೆ.

'ಸಾ... ಎಳೀ ಮಗಾ. ಸ್ವಲ್ಪ ಅರ್ಜೆಂಟು ಹುಡುಕೀ ಸಾ...' ಅಸ್ಗರ್ ಕೈಮುಗಿದ. ಅವನ ಹೆಗಲ ಮೇಲೆ ಕೈ ಇಟ್ಟು ಹೇಳಿದೆ.

'ನನ್ಗೂ ಈವಾಗ್ಲೇ ಅಲ್ವಾ ಗೊತ್ತಾಗಿದ್ದು? ನಾವೇನ್ ಸುಮ್ನೆ ಕೂರೋ ಜಾತಿಯಲ್ಲ... ಮೊದ್ಲು ಮನೆಗೆ ಹೋಗು, ಎಲ್ರಿಗೂ ಧೈರ್ಯ ಹೇಳು...'

## ಕಂಡೂ ಕಾಣಿಸದ ಆ ಎರಡು ಮುಖ

ಯಾಕೋ ಸಮಾಧಾನವಾಗಲಿಲ್ಲ. ಅಸ್ಗರನಿಗೆ ಕಂಪ್ಲೇಂಟು ಕೊಡಲು ಹೇಳಿ ಕ್ರೈಂ ವಿಭಾಗದ ಹರೀಶನೊಂದಿಗೆ ಜೀಪು ಹತ್ತಿದೆ. ಒಂದು ಸಿಸಿಟೀವೀಲಿ ದೃಶ್ಯ ಬಂದಿದೆ ಅಂದ್ರೆ ಬೇರೆಯವುಗಳಲ್ಲೂ ಬಂದಿರಬೇಕು. ಉದ್ದಕ್ಕೂ ಅಂಗಡಿ, ಮನೆಗಳಲ್ಲಿರೋ ಸಿಸಿಟೀವಿಗಳನ್ನು ನೋಡ್ತಾ ಹೋದ್ರೆ ಯಾವುದರಲ್ಲಾದರೂ ಮುಖ ಚಹರೆ ಗೊತ್ತಾಗಬಹುದು. ಅಟ್ಲೀಸ್ಟ್ ಅವರು ಹೋದ ದಾರಿಯಾದರೂ...

ಪ್ರಯತ್ನ ಕೈಕೊಡಲಿಲ್ಲ. ನೋಡಿದ ಮೂರ್ನಾಲ್ಕು ಸಿಸಿಟೀವಿಗಳಲ್ಲಿ ಅದೇ ಹುಡುಗ ಮಗುವನ್ನು ಎತ್ಕೊಂಡು ಹೋಗ್ತಾ ಇರೋದು ಕಾಣಿಸಿತು. ಟ್ವಿಸ್ಟು ಸಿಕ್ಕಿದ್ದು ಇನ್ನೂ ಎರಡು ಕ್ಯಾಮೆರಾಗಳನ್ನು ಪರಿಶೀಲಿಸಿದ ನಂತರ!

ಬುರ್ಖಾ ಧರಿಸಿದ ಮಹಿಳೆಯೊಬ್ಬಳು ಸ್ವಲ್ಪ ದೂರದ ನಂತರ ಬಂದು ಆ ಹುಡಗನನ್ನು ಸೇರಿಕೊಳ್ಳುತ್ತಾಳೆ. ಮಗುವನ್ನು ಹುಡುಗನ ಕೈಯಿಂದ ಇಸಿದು ಎತ್ತಿಕೊಂಡು ಮುನ್ನಡೆಯುತ್ತಾಳೆ. ಇಬ್ಬರಿಗೂ ಯಾವುದೇ ಅವಸರವಿಲ್ಲ. ನೋಡಿದರೆ ತಾಯಿ ಮಗನಂತೆ ಕಾಣಿಸುತ್ತಾರೆ. ಇಬ್ಬರ ವಯಸ್ಸಿನಲ್ಲೂ ಆ ಅಂತರವಿದೆ. ಹಾಗೇ ನಡೆದುಕೊಂಡು ಬಸ್‌ನಿಲ್ದಾಣದ ತನಕ ಬರುತ್ತಾರೆ. ಒಂದೆರೆಡು ನಿಮಿಷಗಳ ನಂತರ ಅಲ್ಲಿಂದ ಗಾಯಬ್! ವಾಹನ ಸಂದಣಿಗಳ ಮರೆಯಲ್ಲಿ ಅವರು ಮುಂದಕ್ಕೆ ನಡೆದುಹೋದರಾ? ಅಥವಾ ಯಾವುದಾದರೂ ಬಸ್ ಹತ್ತಿಕೊಂಡರಾ? ಕಾಣಿಸಲಿಲ್ಲ.